ನಾವು ಮಾಡುವ ಕಾರ್ಯವನ್ನು ಭಗವಂತನ ಸೇವೆ ಎಂದು ಭಾವಿಸಿ ಮಾಡುವುದೇ ಅತಿ ಶ್ರೇಷ್ಠ ಸಾಧನೆ. ಇದು ಎಲ್ಲರಿಗೂ ಶ್ರೇಯಸ್ಸನ್ನು ಉಂಟುಮಾಡುವುದು. ಭಗವಂತನು ನಮ್ಮೆಲ್ಲ ಕಾರ್ಯಗಳನ್ನೂ ನಮ್ಮೊಳಗಿನ ಚಿಂತನೆಗಳನ್ನೂ ಸಾಕ್ಷೀರೂಪದಲ್ಲಿ ಸದಾ ವೀಕ್ಷಿಸುತ್ತಿರುವವನು. ನಾವು ಕಾರ್ಯಾಲಯದಲ್ಲಿ, ಕಾರ್ಖಾನೆಗಳಲ್ಲಿ, ಶೈಕ್ಷಣಿಕ ಸಂಸ್ಥೆಗಳಲ್ಲಿ ಸರಿಯಾಗಿ ಕಾರ್ಯ ನಿರ್ವಹಿಸದೆ ಇತರ ಜನರನ್ನು ವಂಚಿಸಬಹುದು. ಆದರೆ ಎಲ್ಲದರ ಸಾಕ್ಷೀರೂಪನಾದ ಪರಮಾತ್ಮನನ್ನು ವಂಚಿಸಲಾದೀತೆ? ಈ ಸತ್ಯವನ್ನು ಮನಗಂಡು ಎಲ್ಲ ಕೆಲಸಗಳನ್ನು ಭಗವಂತನ ಸೇವೆ ಎಂದು ಮಾಡಿದರೆ ಎಲ್ಲರೂ ಭಗವಂತನ ದೇಗುಲಗಳೇ ಆಗಿ ಬಿಡುವರು. ಸ್ವಾಮೀಜಿ ಹೇಳುವ ಈ ನುಡಿಗಳು ನಮ್ಮ ಚೇತನವನ್ನು ಬಡಿದೆಬ್ಬಿಸುವುವು: "ನಾನು ನಂಬಿರುವ ಒಬ್ಬನೇ ದೇವನನ್ನು ಪೂಜಿಸುವುದಕ್ಕಾಗಿ, ನಾನು ಮೇಲಿಂದ ಮೇಲೆ ಜನ್ಮವೆತ್ತಲು ಸಿದ್ಧನಾಗಿದ್ದೇನೆ, ಸಾವಿರಾರು ಕಷ್ಟಗಳನ್ನು ಸಹಿಸಲು ಸಿದ್ಧನಾಗಿದ್ದೇನೆ. ನಾನು ನಂಬುವ ಒಂದೇ ದೇವರು ಎಲ್ಲಾ ಆತ್ಮಗಳಲ್ಲಿಯೂ ಸಮಾನರೂಪದಲ್ಲಿರುವ ಆ ಪರಮಾತ್ಮ. ಎಲ್ಲ ದೇವರುಗಳಿಗಿಂತಲೂ ದುಷ್ಟರು, ದುಃಖಿಗಳು, ದರಿದ್ರರು ಯಾರೋ ಅವರೇ ನನ್ನ ವಿಶೇಷ ಪೂಜೆಯನ್ನು ಸ್ವೀಕರಿಸುವವರು" (*Letters of Swami Vivekananda*, p.157). ಎಂದು, ಎಲ್ಲ ಕಾರ್ಯಗಳೂ ಭಗವಂತನ ಪೂಜೆಯಾಗುವುವೋ ಅಂದು ನಾವು ನಮ್ಮ ದಿನನಿತ್ಯದ ಜೀವನದಲ್ಲಿ 'ಯೋಗಿ'ಗಳಾಗುತ್ತೇವೆ. ಈ ಬಗೆಯ ಸಾಧನೆ ಜಗತ್ತಿನ ಹಿತಕ್ಕೂ, ವ್ಯಕ್ತಿಯ ಮೋಕ್ಷಕ್ಕೂ ಸಹಕಾರಿಯಾಗುತ್ತದೆ. (ವಿ.ಪ್ರ)

## ಪ್ರಹಸನ ಪ್ರಸಂಗ

ನಾವೆಷ್ಟು ದಡ್ಡರೆಂದು ನಮಗೇ ತಿಳಿದಿರುವುದಿಲ್ಲ. ನಾವು ತುಂಬ ಬುದ್ಧಿವಂತರೆಂದು ಭಾವಿಸಿ ನಮ್ಮ ಬುದ್ಧಿವಂತಿಕೆಯನ್ನು ಇತರರಿಗೆ ತೋರಿಸಲು ಹೋಗಿ ನಮ್ಮ ದಡ್ಡತನವನ್ನೇ ತೋರಿಸಿಕೊಳ್ಳುತ್ತೇವೆ.

ಸರ್ದಾರ್‌ಜಿಗಳ ಒಂದು ಸಮಾವೇಶದಲ್ಲಿ ಡಾ. ಗುಪ್ತರು ಅತಿಥಿಗಳಾಗಿ ಹೋಗಿದ್ದರು. ಅದು ಇದು ಮಾತನಾಡುತ್ತ ಸಂಭಾಷಣೆಯು ಡಾಕ್ಟರಿಕೆಗೆ ಸಂಬಂಧಪಟ್ಟ ವಿಷಯಕ್ಕೆ ತಿರುಗಿತು. ಸರ್ದಾರ್ಜಿ ತಮ್ಮ ಬುದ್ಧಿ ಚಮತ್ಕಾರವನ್ನು ಮೆರೆಸುತ್ತ ಕೇಳಿದರು: "ಡಾಕ್ಟ್ರೇ, ತುಂಬ ನಾರ್ಮಲ್ಲಾಗಿ ಕಾಣುವ ವ್ಯಕ್ತಿಯ ಮಾನಸಿಕ ದೋಷವನ್ನು ಹೇಗೆ ಕಂಡುಹಿಡಿಯುತ್ತೀರಿ?"

ಡಾ. ಗುಪ್ತ : "ಅದು ಅಷ್ಟೇನು ಸುಲಭವಲ್ಲ. ಎಲ್ಲರೂ ಸುಲಭವಾಗಿ ಉತ್ತರಿಸಬಲ್ಲ ಸರಳ ಪ್ರಶ್ನೆಯನ್ನು ಅವನಿಗೆ ಕೇಳಬೇಕು. ಅವನು ಉತ್ತರಿಸಲು ಹಿಂದೆ ಮುಂದೆ ನೋಡಿದರೆ, ಏನೋ ದೋಷವಿದೆ ಎಂದು ಅರ್ಥ."

ಸರ್ದಾರ್ಜಿ : "ಯಾವ ರೀತಿ ಪ್ರಶ್ನೆ ಕೇಳುತ್ತೀರಿ, ನೋಡೋಣ?"

ಡಾಕ್ಟರ್ : "ಉದಾಹರಣೆಗೆ ಈ ಪ್ರಶ್ನೆ ಕೇಳಬಹುದು: ಕ್ಯಾಪ್ಟನ್ ಕುಕ್ ಮೂರು ಬಾರಿ ಭೂಪ್ರದಕ್ಷಿಣೆ ಮಾಡಿದನು. ಅದರಲ್ಲಿ ಒಂದು ಪ್ರದಕ್ಷಿಣೆಯ ಸಮಯದಲ್ಲಿ ಅವನು ತೀರಿಕೊಂಡನು. ಅದು ಎಷ್ಟನೆಯ ಪ್ರದಕ್ಷಿಣೆ?"

ಸರ್ದಾರ್ಜಿ ಸ್ವಲ್ಪ ಹೊತ್ತು ಯೋಚಿಸಿ, ಅತೃಪ್ತಿಯ ನಗೆ ಬೀರುತ್ತ ಹೇಳಿದರು: "ಇನ್ನಾವುದಾದರೂ ಪ್ರಶ್ನೆ ಕೇಳಿ. ನನಗೆ ಇತಿಹಾಸದ ಬಗ್ಗೆ ಅಷ್ಟೊಂದು ಗೊತ್ತಿಲ್ಲ."

❁ ❁ ❁

ನಮ್ಮಲ್ಲಿ ಪ್ರಾಪಂಚಿಕ ವಿಷಯಗಳು ಎಷ್ಟೊಂದು ತುಂಬಿಕೊಂಡು ಇರುತ್ತವೆ ಎಂದರೆ ಸದ್ಭಾವನೆಗಳಿಗೆ ಅಲ್ಲಿ ಜಾಗವೇ ಇರುವುದಿಲ್ಲ. ಅವಕ್ಕೆ ನಿರ್ದಿಷ್ಟವಾದ ನೆಲೆಯೇ ಇಲ್ಲದೆ, ಅವುಗಳಿದ್ದರೂ ಅವುಗಳನ್ನು ಸರಿಯಾದ ರೀತಿಯಲ್ಲಿ ಉಳಿಸಿಕೊಳ್ಳುವುದು ಕಷ್ಟವಾಗುತ್ತದೆ.

ನ್ಯೂಯಾರ್ಕ್ ನಗರದ ಶ್ರೀಮಂತ ಮಹಿಳೆಯೊಬ್ಬಳು ಒಂದು ಪ್ರಸಿದ್ಧ ಬ್ಯಾಂಕಿಗೆ ಹೋಗಿ ೫,೦೦೦ ಡಾಲರ್ ಸಾಲ ಕೇಳಿದಳು. ಬ್ಯಾಂಕ್ ಅಧಿಕಾರಿಯು ಅದಕ್ಕೆ ಏನಾದರೂ ಸೆಕ್ಯೂರಿಟಿ ಬೇಕೆಂದು ಕೇಳಿದ. ಮಹಿಳೆಯು ತನ್ನ ಕಾರಿನ ಬೀಗದ ಕೈಯನ್ನು ನೀಡಿದಳು. ಅದು ಹೊಸ ರೋಲ್ಸ್ ರಾಯ್ಸ್ ಕಾರು. ಕೇವಲ ೫,೦೦೦ ಡಾಲರ್ ಸಾಲಕ್ಕಾಗಿ ೨,೫೦,೦೦೦ ಡಾಲರ್ ಕಾರನ್ನು ಒತ್ತೆ ಇಡುತ್ತಿರುವುದನ್ನು ಕಂಡು ಬ್ಯಾಂಕಿನವರಿಗೆಲ್ಲ ತುಂಬ ಆಶ್ಚರ್ಯವಾಯಿತು.

ಬ್ಯಾಂಕಿನ ಉದ್ಯೋಗಿಯೊಬ್ಬನು ಕಾರನ್ನು ಪರೀಕ್ಷಿಸಿ ಗ್ಯಾರೇಜಿಗೆ ತೆಗೆದುಕೊಂಡು ಹೋಗಿ ಇರಿಸಿದನು. ಮಹಿಳೆಯು ೫೦೦೦ ಡಾಲರ್ ತೆಗೆದುಕೊಂಡು ಹೋದಳು.

ಎರಡೇ ವಾರದಲ್ಲಿ ಆಕೆ ಬಂದು ೫೦೦೦ ಡಾಲರನ್ನು ೧೫ ಡಾಲರ್ ಬಡ್ಡಿಯೊಂದಿಗೆ ಹಿಂದಿರುಗಿಸಿದಳು. ಅಧಿಕಾರಿಯು ಆಕೆಯನ್ನು ಕೇಳಿದ : "ನಿಮ್ಮೊಡನೆ ವ್ಯವಹರಿಸಲು ಸಂತೋಷವಾಗುತ್ತದೆ. ಆದರೆ ಒಂದು ಆಶ್ಚರ್ಯ. ನೀವು ಕೋಟ್ಯಾಧಿಪತಿಗಳಂತೆ ಕಾಣುತ್ತೀರಿ. ಆದರೂ ಕೇವಲ ೫೦೦೦ ಡಾಲರ್ ಸಾಲ ತೆಗೆದುಕೊಳ್ಳುವುದು ತುಂಬ ಆಶ್ಚರ್ಯವಲ್ಲವೆ?"

ಮಹಿಳೆ ಹೇಳಿದಳು : "ಹೌದು, ನಿಜ. ನೋಡಿ, ಕೇವಲ ೧೫ ಡಾಲರ್‌ಗಳಿಗೆ ನನ್ನ ಈ ಕಾರನ್ನು ಎರಡು ವಾರಗಳವರೆಗೆ ನ್ಯೂಯಾರ್ಕ್‌ನಲ್ಲಿ ಪಾರ್ಕ್ ಮಾಡಲು ಹೇಗೆ ಸಾಧ್ಯ? ಪಾರ್ಕ್ ಮಾಡಿದರೂ ಎರಡು ವಾರಗಳನಂತರ ಅದು ಅಲ್ಲೇ ಇರುತ್ತದೆ ಎಂಬುದಕ್ಕೆ ಗ್ಯಾರಂಟಿ ಏನು?" (ವಿ.ಪ್ರ)

❁ ❁ ❁

ಪ್ರಾಯೋಜಕರು : Lalco Silks & Sarees, No.87, C T Street, Bangalore - 560 002, Manufactures: Sarees & Silk